ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 898/2020 .

ಪ್ರಾ.ಸಾ. : 15
ಚಾ.ಸಾ. : 22

| | | |
|---|---|---|
| ಹೆಸರು | : | Dr. Mujebur Rehaman |
| ತಂದೆಯ ಹೆಸರು | : | Late Hussain Sahib |
| ವಯಸ್ಸು | : | 51 ವರ್ಷ |
| ಉದ್ಯೋಗ | : | Chief Veternary Offficer |
| ವಿಳಾಸ | : | ಹುಣಸೂರು |

... ................................................................................................... ...

ದಿನಾಂಕ 20 ನೇ ಡಿಸೆಂಬರ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

1. ನಾನು 2017 ರಿಂದ 2021 ರ ನಾಗರಹೊಳೆ ವನ್ಯ ಜೀವಿ ವಲಯದಲ್ಲಿ ಪಶು ವೈದ್ಯರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ- 26.08.2020 ರಂದು ನಾನು ಗಂಡು ಹುಲಿಯ ಮರಣೋತ್ತರ ಪರೀಕ್ಷೆಯನ್ನು ನಡೆಸಿರುತ್ತೇನೆ. ಈ ಬಗ್ಗೆ ವರದಿ ನೀಡಿರುತ್ತೇನೆ. ಮೃತ ಹುಲಿಯನ್ನು ಪರೀಕ್ಷಿಸಿದಾಗ ಹುಲಿಯ ಕೆಲವು ಅಂಗಾಗಳು ನಾಪತ್ತೆ ಆಗಿರುವುದು ಕಂಡು ಬಂತು. ಮೃತ ಹುಲಿಯ ದೇಹದಲ್ಲಿ ಕಬ್ಬಿಣದ ಬಾಲ್ ಗಳು ಪತ್ತೆ ಆಗಿರುತ್ತದೆ. ಮೇಲ್ದವಡೆ ಹಾಗೂ ಕೆಳದವಡೆ ಕೋರೆ ಹಲ್ಲುಗಳು ನಾಪತ್ತೆ ಆಗಿರುತ್ತದೆ. ಚರ್ಮದ ತುಂಡು ಹಾಗೂ ಕೆಲವೊಂದು ಮಾಂಸದ ತುಂಡುಗಳನ್ನು ಮುಂದಿನ ತನಿಖಾಗಾಗಿ ಸಿ. ಸಿ. ಎಂ. ಬಿ ಹೈದರಬಾದ್ ಅಲ್ಲಿಗೆ ಕಳಿಸಲಾಗಿತ್ತು.

3. ನಂತರ ಸಿ. ಸಿ. ಎಂ. ಬಿ ಹೈದರಬಾದ್ ಪ್ರಯೋಗಾಲಯದಿಂದ ಬಂದ ವರದಿಯನ್ನು ಸಹ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸಾಕ್ಷಿಯು ಮರಣೋತ್ತರ ಪರೀಕ್ಷೆಯ ವರದಿಯನು ನೋಡಿ ಗುರುತಿಸಿದ್ದನ್ನು ನಿ. ಪಿ. 62 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿ. ಪಿ. 62 (ಎ) ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಃ ಮುಕ್ತಾಯ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ</u> : -

1. ಮರಣೋತ್ತರ ಪರೀಕ್ಷೆ ಮಾಡುವ ಸಮಯದಲ್ಲಿ ಹುಲಿಯ ಮುಂಗಾಲು ಮತ್ತು ಹಿಂಗಾಲುಗಳನ್ನು ಕತ್ತರಿಸಿರುತ್ತಾರೆ ಎಂದರೆ ಸರಿ. ಹುಲಿಯ ಕಾಲಿನ ಉಗುರುಗಳು ಪತ್ತೆ ಆಗಿರುವುದಿಲ್ಲ. ಹುಲಿಯ ದೇಹವನ್ನು ಅಳತೆ ಮಾಡಿದಾಗ 153 ಸೆಂ. ಮೀ ಇತ್ತು ಎಂದರೆ ಸರಿ. ಬಲದ ಬುಡದಿಂದ ತುದಿಯವರೆಗೆ 93 ಸೆಂ. ಮೀ ಇತ್ತು ಎಂದರೆ ಸರಿ. ಎಡ ಭುಜದಿಂದ ಕತ್ತರಿಸಿದ ಕಾಲಿನವರೆಗೆ 49 ಸೆಂ. ಮೀ ಇತ್ತು ಎಂದರೆ ಸರಿ. ಹುಲಿಯ ಎದೆಯ ಸುತ್ತಳತೆ 138 ಸೆಂ. ಮೀ ಇತ್ತು ಎಂದರೆ ಸರಿ. ಹುಲಿಯ ಬಾಯಿಯನ್ನು ಪರೀಕ್ಷಿಸಿದಾಗ ಮೇಲ್ದವಡೆ ಹಾಗೂ ಕೆಳದವಡಯ ಅರ್ಧ ಮುರಿದ ಕೋರೆಹಲ್ಲುಗಳು ಕಾಣೆಯಾಗಿತ್ತು ಎಂದರೆ ಸರಿ. ಹುಲಿಯ ವಯಸ್ಸು ಅಂದಾಜು 6 ರಿಂದ 7 ವರ್ಷ ಆಗಿತ್ತು ಎಂದರೆ ಸರಿ. ನಂತರ ಲೋಹ ಶೋಧನಾ ಉಪಕರಣದಿಂದ ಹುಲಿಯ ಮೃತ ದೇಹವನ್ನು ಪರೀಕ್ಷಿಸಿದಾಗ ಬಲ ಹಿಂಗಾಲಿನ ತೊಡೆ ಹಾಗೂ ಹೊಟ್ಟೆಯ ಮೇಲ್ಭಾಗದ ಸಮೀಪ ಸೀಸದ ತುಂಡು ಪತ್ತೆಯಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಸೀಸದ ತುಂಡು, ಮಾಂಸದ ತುಂಡು, ಹಾಗೂ ಗಾಯವಾದ ಚರ್ಮದ ತುಣುಕು, ಅರ್ಧ ಮುರಿದ ಕೋರೆಹಲ್ಲುಗಳು ಸಂಗ್ರಹಿಸಲಾಯಿತು ಎಂದರೆ ಸರಿ. ಆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿಲಾಯಿತು ಎಂದರೆ ಸರಿ. ಆಗ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಲಾಗಿ ಸಮಯ ನೀಡಲಾಯಿತು.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)